ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 304

ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್.ಆರ್. ಪಾಟೀಲ್.

ಉತ್ತರಿಸುವ ಸಚಿವರು : ಉನ್ನತ ಶಿಕ್ಷಣ ಸಚಿವರು.

ಉತ್ತರಿಸಬೇಕಾದ ದಿನಾಂಕ : 16-07-2019

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕನ್ನಡ ವಿಶ್ವವಿದ್ಯಾಲಯದ ನೌಕರರೊಬ್ಬರ ವಿರುದ್ಧ ವಿಶ್ವವಿದ್ಯಾಲಯ ಜಿಲ್ಲಾ ನ್ಯಾಯಾಧೀಶರು ವಿಚಾರಣೆ ನಡೆಸಿ ನೀಡಿದ ವರದಿಯಲ್ಲಿ ಆರೋಪಗಳು ಸಾಬೀತಾದರೂ ಅವರ ಮೇಲೆ ವಿಶ್ವವಿದ್ಯಾಲಯ ಯಾಕೆ ಕ್ರಮಕೈಗೊಂಡಿಲ್ಲ;	ವಿಚಾರಣಾ ವರದಿಯಲ್ಲಿ ಸಾಬೀತಾದ ಆರೋಪಗಳನ್ನು ಸಮರ್ಥಿಸುವ ಸಾಕ್ಷ್ಯಗಳನ್ನು/ ದಾಖಲೆಗಳನ್ನು ಒದಗಿಸದೇ ಇದ್ದುದರಿಂದ ವಿಚಾರಣಾ ವರದಿಯನ್ನು ಸಕ್ಷಮ ಪ್ರಾಧಿಕಾರವು ಒಪ್ಪಿರುವುದಿಲ್ಲ.
ಆ)	ಶಿವಶರಣೆ ಅಕ್ಕಮಹಾದೇವಿ, ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚನ್ನಮ್ಮ ಅವರುಗಳನ್ನು ಅಂತರ್ಜಾಲದಲ್ಲಿ ಅವಹೇಳನಕಾರಿ ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಈ ನೌಕರನ ಮೇಲೆ ವಿಶ್ವವಿದ್ಯಾಲಯ ಏನು ಕ್ರಮಕೈಗೊಂಡಿದೆ.	ಖಾಸಗಿ ದೂರಿನ ತನಿಖೆಗೆ ಮಾನ್ಯ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ತಡೆಯಾಜ್ಞೆ ನೀಡಿರುತ್ತದೆ.
ಇ)	ಮಹಿಳೆಯರನ್ನು ಅಂತರ್ಜಾಲದಲ್ಲಿ ಅವಮಾನ ಮಾಡಿರುವುದು ಸಾಬೀತಾದರೂ ಕನ್ನಡ ವಿಶ್ವವಿದ್ಯಾಲಯದ ನೌಕರರೊಬ್ಬರನ್ನು ಸದರಿ ನೌಕರರಿಗೆ ಯಾವುದೇ ಷರತ್ತಿಲ್ಲದೆ ಕಾರಾಗೃಹದಲ್ಲಿ ಇದ್ದ ಅವಧಿಯನ್ನು ಸೇವಾ ಅವಧಿ ಎಂದು ಪರಿಗಣಿಸಿ ಯಾವ ನಿಯಮದಡಿ ಅಮಾನತ್ತು ಆದೇಶವನ್ನು ಹಿಂಪಡೆಯಲಾಗಿದೆ.	ಆರೋಪಿತ ನೌಕರನನ್ನು 2 ವರ್ಷಗಳಿಂದ ಅಮಾನತ್ತಿನಲ್ಲಿ ಇರಿಸಲಾಗಿತ್ತು ಸಿ.ಸಿ.ಎ ನಿಯಮಾವಳಿ ಪ್ರಕಾರ ಅಮಾನತ್ತು ಹಿಂಪಡೆಯಲಾಗಿದೆ.

ಸಂಖ್ಯೆ: ಇಡಿ 08 ಕೆವಿವಿ 2019

(ಜಿ.ಟಿ.ದೇವೇಗೌಡ)

ಉನ್ನತ ಶಿಕ್ಷಣ ಸಚಿವರು